ಗದ್ದಿಗ್ಯಪ್ಪನ ಎದೆಗೆ ಜಾಡಿಸಿದಂತಾಗಿ ಒಂದಷ್ಟೊತ್ತು ನಿಂತಲ್ಲೇ ನಿಂತ. ಅಷ್ಟರಲ್ಲಿ ಯಾವುದೋ ಒಂದು ನಾಯಿ ಈ ಅಪರಿಚಿತ ಗಡ್ಡಧಾರಿಯನ್ನು ಕಂಡು ಬೊಗುಳತೊಡಗಿತು. ಅದಕ್ಕೆ ಹಲವು ನಾಯಿಗಳು ಜೊತೆಗೂಡಿ ದೊಡ್ಡದೊಂದು ಸದ್ದು ಗಪ್ಪಾಗಿದ್ದ ಊರಿನ ಎದೆಯ ಮೇಲೆ ಎದ್ದಾಡಿತು. ಒಂದಷ್ಟೊತ್ತು ಬೊಗುಳಿದ ನಾಯಿ ಪಡೆ ತಮ್ಮ ಬೊಗುಳುವಿಕೆಗೆ ಮನುಷ್ಯರು ಅನಿಸಿಕೊಂಡ ಯಾವೊಂದೂ ಪ್ರಾಣಿಯೂ ಕ್ಯಾರೆ ಅನ್ನದಿದ್ದಾಗ ಇದ್ದಕ್ಕಿದ್ದಂತೆ ಮೌನಕ್ಕೆ ಜಾರಿತು.

ಸ್ಕೂಲು, ಅಂಗನವಾಡಿಗಳನ್ನು ದಾಟಿ ನಡೆದ ಗದ್ದಿಗ್ಯಪ್ಪನಿಗೆ ಮುಂದೆ ಒಂದಷ್ಟು ದೂರದಲ್ಲಿ ಒಂದು ಸಣ್ಣ ದಿಬ್ಬದಲ್ಲಿ ಊರ ಹೆಬ್ಬಾಗಿಲು ಹಾಗೂ ಅದರ ಹಿಂದಿದ್ದ ಕರುವುಗಲ್ಲುಗಳು ಕಂಡವು. ಅತ್ತ ಹೋಗುವ ದಾರಿ ಈ ಹಿಂದೆ ಉರುಟು ಕಲ್ಲುಗಳ ಒರಟು ದಾರಿಯಾಗಿತ್ತು. ಆದರೀಗ ಅದು ಕಾಂಕ್ರೀಟ್ ರಸ್ತೆಯಾಗಿ ಬದಲಾಗಿತ್ತು. ಆ ರಸ್ತೆಯಲ್ಲಿ ನಡೆದು ಕರುವುಗಲ್ಲಿನ ಬಳಿ ನಿಂತ ಗದ್ದಿಗ್ಯಪ್ಪ. ಆ ಕಲ್ಲುಗಳು ಕೆಂಪು ಮತ್ತು ಬಿಳಿ ಗೆರೆಗಳನ್ನು ಬಳಕಂಡಿದ್ದು ಕಾಣದಿದ್ದರೂ ಕಲ್ಪಿಸಿಕೊಂಡ.

ಅಲ್ಲಿಂದ ನೇರ ಕಣ್ಣಳತೆಯ ದೂರದಲ್ಲಿ ಗದ್ದಿಗ್ಯಪ್ಪನ ಮನೆ. ಅದರ ಮುಂದೊಂದು ಬೀದಿ ದೀಪ. ಪಕ್ಕದಲ್ಲೊಂದು ಹಿತ್ತಿಲು. ಅದರೊಳಗೊಂದು ಹುಲ್ಲಿನ ಬಣವೆ ದೂರದಿಂದಲೇ ಕಾಣುತ್ತಿದ್ದವು. ಮನೆಯನ್ನೇ ದಿಟ್ಟಿಸುತ್ತಾ ನಿಂತ ಗದ್ದಿಗ್ಯಪ್ಪ ಅಪಾರ ಸಂಕಟಕ್ಕೊಳಗಾಗಿ ಅವನರಿವಿಗೇ ಬಾರದಂತೆ ಅವನೊಳಗೆ ಬಿಕ್ಕಳಿಕೆಗಳೆದ್ದವು. ಅವುಗಳ ಭರಾಟೆಗೆ ಅವನಿಗೆ ಉಸಿರು ಕಟ್ಟಿದಂತಾಯ್ತು. 'ಅಯ್ಯೋ ಅವ್ವಾ, ಆಜಿ, ಕಂದಾ ಗಾಂಧಿ' ಅಂತ ಅನ್ನಬೇಕೆಂದು ಹೊರಟವನ ಆ ನುಡಿಗಳು ಅವನೊಳಗೇ ಅನುರಣಿಸಿದವು.

ಗದ್ದಿಗ್ಯಪ್ಪ ನಿಂತಲ್ಲಿಂದ ತನ್ನ ಮನೆಯ ಜಗಲಿಯನ್ನು ತಲುಪಲು ತುಂಬಾ ಹೊತ್ತುಹಿಡಿಯಿತು. ಮಾಡಿಗೆ ಕವುಚಿದ್ದ ಕಪ್ಪೆಂಚುಗಳು ಅಂಗಳದ ತುಂಬಾ ಈಡಾಡಿದ್ದವು. ಅವುಗಳನ್ನೂ ಆತಿಡಿದುಕೊಂಡಿದ್ದ ಈಚಲು ಜವಿ ಹಾಗೂ ತೊಲೆಗಳು ಮಳೆ ಮತ್ತು ಬಿಸಿಲಿನ ಹೊಡೆತಕ್ಕೆ ಪೂರಾ ಕರಗಿ ಸತುವು ಕಳಕಂಡಿದ್ದರೂ ನೆಪ ಮಾತ್ರಕ್ಕೆ ಇದ್ದಲ್ಲೇ ಹಂಗೇ ತಗಲಾಕಿಕೊಂಡಿದ್ದವು. ಮುಂಬಾಗಿಲ ಮುಂದಿನ ಜಗಲಿ ಪೂರಾ ಇಟ್ಟಿಗೆಗಳು ಕಾಣುವಷ್ಟು ದೊಗರು ಬಿದ್ದಿತ್ತು. ಅಂಗಳದಲ್ಲಿ ದನ ಕರುಗಳನ್ನು ಕಟ್ಟಾಕುತ್ತಿದ್ದ ಕುರುಹಾಗಿ ದನಗಳನ್ನು ಕಟ್ಟುವ ಗೂಟಗಳು ಹಾಗೂ ಸಗಣಿ ತೊಪ್ಪೆಗಳನ್ನು ಗುಡ್ಡಾಕಿದ್ದ ಪುಟ್ಟದೊಂದು ತಿಪ್ಪೆಯಿತ್ತು. ಚಳಿಯ ಹೊಡೆತ ಏರುತ್ತಲೇ ಇತ್ತು. ಚಳಿ ಮತ್ತು ಕತ್ತಲೆಗಳು ಪೈಪೋಟಿಗೆ ಬಿದ್ದಿದ್ದವು. ಗದ್ದಿಗ್ಯಪ್ಪ ದೊಗರು ಬಿದ್ದಿದ್ದ ಜಗಲಿಯ ಮೇಲೆ ಬಗಲಲ್ಲಿದ್ದ ಚೀಲವನ್ನಿರಿಸಿ ತಲೆ ಬಾಗಿಲಿಗಾಗಿ ತಡಕಿದ. ಏನೂ ಸಿಗಲಲ್ಲವಾದ್ದರಿಂದ ಚೀಲದೊಳಗಿನ ಪುಟ್ಟ ಬ್ಯಾಟರಿಯನ್ನು ಆಚೆ ತಕ್ಕಂಡು ಅತ್ತ ಬಿಟ್ಟ. ತಲೆ ಬಾಗಿಲಿದ್ದೆಡೆ ಅದಿದ್ದ ಅಗಲಕ್ಕೂ ಬರೀ ಗೋಡೆಯಿತ್ತು. ನಿಲಗಳ ಸಮೇತ ಇಡೀ ಬಾಗಿಲನ್ನು ಕಿತ್ತೊಯ್ಯಲಾಗಿತ್ತು. ಕಿಟಕಿಗಳತ್ತ ಬೆಳಕು ಬಿಟ್ಟರೆ ಅವುಗಳಿಗೂ ಅದೇ ಸ್ಥಿತಿಯಾಗಿತ್ತು.

ಬ್ಯಾಟರಿಯ ಬೆಳಕಲ್ಲಿ ಪಡಸಾಲೆಗೆ ಅಡಿಯಿಟ್ಟ ಗದ್ದಿಗ್ಯಪ್ಪನ ಕಾಲಿಗೆ ಥರಾವರಿ ಮದ್ಯದ ಖಾಲಿ ಸೀಸೆಗಳು ಹಾಗೂ ಬೀಡಿ ಸಿಗರೇಟುಗಳ ತುಂಡುಗಳು ರಾಚಿದವು. ರಾಗಿ ತುಂಬುತ್ತಿದ್ದ ಪಣತದತ್ತ ನೋಡಿದವನಿಗೆ ಅಲ್ಲಿ ಇಲಿ ಹೆಗ್ಗಣಗಳು ತೋಡಿದ್ದ ಮಣ್ಣಿನ ಪುಟ್ಟ ಪುಟ್ಟ ಗುಡ್ಡೆಗಳಿದ್ದವು. ತೊಲೆಗಳಲ್ಲಿ ಜೇಡ ಕಟ್ಟಿಕೊಂಡಿದ್ದ ಬಲೆಗಳು ಗದ್ದಿಗ್ಯಪ್ಪನ ತಲೆಗೆ ಸುತ್ತಿಕೊಳ್ಳತೊಡಗಿದ್ದರಿಂದ ಅದನ್ನು ಬಿಡಿಸಿಕೊಳ್ಳುತ್ತಾ ನಡುಮನೆಗೆ ಹೋದರೆ ಅಲ್ಲಿ ಒಂದು ಭಾಗದಲ್ಲಿ ಗೋಡೆ ಕುಸಿದು ದೊಡ್ಡದೊಂದು ಕಿಂಡಿಯಾಗಿತ್ತು. ಅದರ ತಡಿಯಲ್ಲಿ ಎಂಥೆಂಥವೋ ಗಿಡ ಗಂಟೆಗಳು ಬೆಳಕಂಡಿದ್ದವು. ಅವುಗಳಿಗಾಗಿ ಕಿಂಡಿಯೊಳಗಿಂದ ಕುರಿ ಮೇಕೆಗಳು ಓಡಾಡಿದ್ದವು. ಹಂಗಾಗಿ ಅಲ್ಲಲ್ಲಿ ಅವುಗಳ ಪಿಸಿಕೆಗಳು ಬಿದ್ದಿದ್ದವು.

ಗದ್ದಿಗ್ಯಪ್ಪ ಎಷ್ಟು ಅದುಮಿಟ್ಟುಕೊಂಡರೂ ಅದನ್ನು ಮೀರಿ ದುಃಖದ ಕಟ್ಟೆಯೊಡೆಯಿತು. ಅಳಲೂ ಆಗದಷ್ಟು ಗಂಟಲು ಕಟ್ಟಿ ಬಂತು. ಅತ್ತು ಹಗುರಾಗಲು ನೋಡಿದ ಗದ್ದಿಗ್ಯಪ್ಪನಿಗೆ ಸಂಕಟ ಪೂರಾ ಆಚೆ ಬಾರದೆ ಸತಾಯಿಸತೊಡಗಿತು. ಕಣ್ಣಿಗೆ ಪೂರಾ ಕತ್ತಲು ಕವಿದಂತಾಯ್ತು. ನಿಂತಲ್ಲೇ ಗೋಡೆಗಾತುಕೊಂಡ. ಕೈಯ್ಯಲ್ಲಿದ್ದ ಬ್ಯಾಟರಿ ಕೆಳಕ್ಕೆ ಬಿತ್ತು. ಚಕ್ಕನೆ ಬಿದ್ದ ಬೆಳಕಿಗೆ ಗಾಬರಿಯಾಗಿ ಹಾವುರಾಣಿಯೊಂದು ಪಣತದಲ್ಲಿ ಇಲಿಗಳು ಕೆರೆದು ಮಾಡಿದ್ದ ಬಿಲದೊಳಕ್ಕೆ ದೌಡಾಯಿಸಿತು. ಗದ್ದಿಗ್ಯಪ್ಪ ಮತ್ತೆ ಸಾವರಿಸಿಕೊಳ್ಳುವ